**ದಿನಾಂಕಃ 22.10.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ –**

ಚಾ.ಸಾ. 17 ಮತ್ತು 18 ರವರು ಪೋಲೀಸ್ ನಿರೀಕ್ಷಕರು ಎನ್ನುವುದು ಸರಿ. ಎಸಿಬಿ ಕಛೇರಿ ಪ್ರಾರಂಭವಾದ ನಂತರ ಡಿ.ಎಸ್.ಪಿ. ರವರು ಠಾಣಾಧಿಕಾರಿ ಎಂದು ಅಧಿ ಸೂಚನೆ ಆಗಿರುತ್ತದೆ ಎನ್ನುವುದು ಸರಿ. ಠಾಣಾಧಿಕಾರಿಯವರನ್ನು ಹೊರತು ಪಡಿಸಿ ಅವರ ಅಧೀನ ಅಧಿಕಾರಿಗಳಿಗೆ ತನಿಖೆ ಕೈಗೊಳ್ಳಲು ಅಧಿಕಾರ ಇರುವುದಿಲ್ಲ ಎಂದು ಮಾಡಿದ ಸಲಹೆಗೆ , ಸಾಕ್ಷಿ , ಸರ್ಕಾರ ಪ್ರತ್ಯೇಕ ಅಧಿಸೂಚನೆಯನ್ನು ಹೊರಡಿಸಿ ಪೋಲೀಸ್ ನಿರೀಕ್ಷಕರು ಸಹ ತನಿಖೆ ಮಾಡಬಹುದು ಎಂದು ಆದೇಶ ಮಾಡಿರುತ್ತದೆ ಎನ್ನುತ್ತಾರೆ. ಆ ಅಧಿಸೂಚನೆಯಲ್ಲಿ "ಠಾಣಾಧಿಕಾರಿ" ಎಂದು ನಮೂದಿಸಿಲ್ಲ, ಆದರೆ ಪೋಲೀಸ್ ನಿರೀಕ್ಷಕರು ತನಿಖೆ ಮಾಡಬಹುದು ಎಂದು ಆದೇಶಿಸಿರುತ್ತಾರೆ ಎನ್ನುವುದು ಸರಿ. ಚಾ,ಸಾ. 17 ರವರು ಮುಂದಿನ ತನಿಖೆಯನ್ನು ಕೈಗೊಳ್ಳಲು ನಾನು ಜ್ಞಾಪನ ಆದೇಶವನ್ನು ನೀಡಿದ್ದೆ. ಅಂತಹ ಯಾವುದೇ ಜ್ಞಾಪನವನ್ನು ನಾನು ನೀಡಿರುವುದಿಲ್ಲ ಎನ್ನುವುದು ಸರಿಯಲ್ಲ.

2. ದೂರುದಾರರು ತಮ್ಮ ಲಿಖಿತ ದೂರಿನಲ್ಲಾಗಲೀ ಅಥವಾ ನನ್ನ ಮುಂದೆ ಹೇಳಿಕೆಯಲ್ಲಾಗಲೀ ಆರೋಪಿ ರೂ.30,000/– ಲಂಚಕ್ಕಾಗಿ ಬೇಡಿಕೆ ಇಟ್ಟಿ ಬಗ್ಗೆ ನಮೂದಿಸಿಲ್ಲ , ಹೇಳಿರುವುದಿಲ್ಲ ಎಂದು ಮಾಡಿದ ಸಲಹೆಗೆ ಸಾಕ್ಷಿ , ದೂರಿನಲ್ಲಿ ಫಿರ್ಯಾದುದಾರರು, ಆರೋಪಿ ರೂ.40,000/– ಲಂಚಕ್ಕಾಗಿ ಬೇಡಿಕೆ ಇಟ್ಟ ಬಗ್ಗೆ

ನಮೂದು ಇದೆ ಎನ್ನುತ್ತಾರೆ. ತನಿಖಾ ಕಾಲಕ್ಕೆ ಲಂಚದ ಹಣ ರೂ.40,000/- ದಿಂದ ರೂ.30,000/- ಕ್ಕೆ ಆದ ಬಗ್ಗೆ ಒಪ್ಪಂದ , ಮಾತುಕತೆ ಕಂಡು ಬಂದಿರುವುದಿಲ್ಲ. ದೂರುದಾರರು ತಮ್ಮ ಹೇಳಿಕೆಯಲ್ಲಿ ಆರೋಪಿ ರೂ.50,000/- ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟಿರುವ ಬಗ್ಗೆ ಹೇಳಿರುವುದಿಲ್ಲ ಎಂದು ಮಾಡಿದ ಸಲಹೆಗೆ ಸಾಕ್ಷಿ , 'ಹೌದು' ಎನ್ನುತ್ತಾರೆ. ದೂರುದಾರ ನನ್ನ ಮುಂದೆ ನೀಡಿದ ಹೇಳಿಕೆಯಲ್ಲಿ , "ಎರಡು ದಿನಗಳ ನಂತರ ನಾನು ರೂ.35,000/- ಗಳನ್ನು ತೆಗೆದುಕೊಂಡು ಆರೋಪಿಯನ್ನು ಭೇಟಿ ಮಾಡಲು ಹೋದೆನು. ಆರೋಪಿಯು ನನ್ನಿಂದ ಸದರಿ ರೂ.35,000/- ಗಳನ್ನು ಸ್ವೀಕರಿಸಿದನು' ಎಂದು ಹೇಳಿರುವುದಿಲ್ಲ. ಈ ಬಗ್ಗೆ ಟ್ರಾಪ್ ಮಹಜರ್ ನಲ್ಲಿ ನಮೂದು ಸಹ ಇಲ್ಲ ಎನ್ನುವುದು ಸರಿ . ದೂರುದಾರ ನನ್ನ ಮುಂದೆ ನೀಡಿದ ಹೇಳಿಕೆಯಲ್ಲಾಗಲೀ ಅಥವಾ ಪ್ರಾಯೋಗಿಕ ಪಂಚನಾಮೆಯಲ್ಲಾಗಲೀ "ನಾನು ಎಸಿಬಿ ಪೋಲೀಸರ ಮುಂದೆ ರೂ.35,000/- ರೂಗಳನ್ನು ಹಾಜರುಪಡಿಸಿದೆನು " ಎಂದು ತಿಳಿಸಿರುವುದಿಲ್ಲ , ನಮೂದಿಸಿರುವುದಿಲ್ಲ. ದೂರುದಾರ ನನ್ನ ಮುಂದೆ ನೀಡಿದ ಹೇಳಿಕೆಯಲ್ಲಾಗಲೀ ಅಥವಾ ಪ್ರಾಯೋಗಿಕ ಪಂಚನಾಮೆಯಲ್ಲಾಗಲೀ " ಎಸಿಬಿ ಪೋಲೀಸರು ಸ್ಥಳಕ್ಕೆ 3 ಜನ ಪಂಚ ಸಾಕ್ಷಿಗಳನ್ನು ಬರ ಮಾಡಿಕೊಂಡಿದ್ದರು " ಎಂದು ತಿಳಿಸಿರುವುದಿಲ್ಲ , ನಮೂದಿಸಿರುವುದಿಲ್ಲ.

3. ದೂರುದಾರ ನನ್ನ ಮುಂದೆ ನೀಡಿದ ಹೇಳಿಕೆಯಲ್ಲಾಗಲೀ ಅಥವಾ ಪ್ರಾಯೋಗಿಕ ಪಂಚನಾಮೆಯಲ್ಲಾಗಲೀ " ಸದರಿ ನೋಟುಗಳ ಸಂಖ್ಯೆಗಳನ್ನು ಬೆರಳಚ್ಚು ಮಾಡಲಾಯಿತು " ಎಂದು ತಿಳಿಸಿರುವುದಿಲ್ಲ ಅದರೆ ಪ್ರಾಯೋಗಿಕ ಪಂಚನಾಮೆಯಲ್ಲಿ ಬೆರಳಚ್ಚು ಮಾಡಿಸಲಾಗಿರುತ್ತದೆ.

4. ದೂರುದಾರ ನನ್ನ ಮುಂದೆ ನೀಡಿದ ಹೇಳಿಕೆಯಲ್ಲಾಗಲೀ ಅಥವಾ ಪ್ರಾಯೋಗಿಕ ಪಂಚನಾಮೆಯಲ್ಲಾಗಲೀ " ಆರೋಪಿ ಕಛೇರಿ ಒಳಗೆ ಇದ್ದನು. ಆರೋಪಿಗೆ ನಾನು ನನ್ನ ಬಳಿ ಇದ್ದ ರೂ.35,000/- ಹಣವನ್ನು ಕೊಟ್ಟೆನು. " ಎಂದು ತಿಳಿಸಿರುವುದಿಲ್ಲ , ನಮೂದಿಸಿರುವುದಿಲ್ಲ.

5. ದೂರುದಾರ ನನ್ನ ಮುಂದೆ ನೀಡಿದ ಹೇಳಿಕೆಯಲ್ಲಾಗಲೀ ಅಥವಾ ಟ್ರಾಪ್ ಪಂಚನಾಮೆಯಲ್ಲಾಗಲೀ "ನಂತರ ನಾನು ಆರೋಪಿಯು ಹಣವನ್ನು ಸ್ವೀಕರಿಸಿದ ಬಗ್ಗೆ ಪಂಚ ಸಾಕ್ಷಿಗಳಿಗೆ ತಿಳಿಸಿದನು. ನಂತರ ಪಂಚ ಸಾಕ್ಷಿಗಳು ಸದರಿ ವಿಚಾರವನ್ನು ಎಸಿಬಿ ಪೋಲೀಸರಿಗೆ ತಿಳಿಸಿದರು" ಎಂದು ತಿಳಿಸಿರುವುದಿಲ್ಲ, ನಮೂದಿಸಿರುವುದಿಲ್ಲ.

6. ದೂರುದಾರ ನನ್ನ ಮುಂದೆ ನೀಡಿದ ಹೇಳಿಕೆಯಲ್ಲಾಗಲೀ ಅಥವಾ ಟ್ರಾಪ್ ಪಂಚನಾಮೆಯಲ್ಲಾಗಲೀ " ನಂತರ ಎಸಿಬಿ ಪೋಲೀಸರು ಸ್ಥಳಕ್ಕೆ ಬಂದು ಆರೋಪಿಯನ್ನು ವಿಚಾರಣೆ ಮಾಡಿದರು. ಆರೋಪಿಯನ್ನು ಪಂಚ ಸಾಕ್ಷಿಗಳು ತೋರಿಸಿದರು. ಎಸಿಬಿ ಪೋಲೀಸರು ಆರೋಪಿಯ ಪ್ಯಾಂಟ್ ನಿಂದ ಹಣವನ್ನು ತೆಗೆದುಕೊಂಡರು " ಎಂದು ತಿಳಿಸಿರುವುದಿಲ್ಲ , ನಮೂದಿಸಿರುವುದಿಲ್ಲ.

7. ದೂರುದಾರ ನಿಮ್ಮ ಮುಂದೆ ನೀಡಿದ ಹೇಳಿಕೆಯಲ್ಲಾಗಲೀ ಅಥವಾ ಟ್ರಾಪ್ ಪಂಚನಾಮೆಯಲ್ಲಾಗಲೀ "ಆರೋಪಿಯು ನನ್ನ ಬಳಿ ಇದ್ದ ರೂ.30,000/- ಗಳನ್ನು ಪಡೆದುಕೊಂಡು ಸದರಿ ನೋಟುಗಳನ್ನು ಎಣಿಸಿ ತನ್ನ ಪ್ಯಾಂಟ್ ನ ಜೇಬಿಗೆ ಹಾಕಿಕೊಂಡನು " ಎಂದು ಹೇಳಿಕೆ ನೀಡಿರುತ್ತಾನೆಯೇ ಎಂದು ಮಾಡಿದ ಸಲಹೆಗೆ ಸಾಕ್ಷಿ, ಆರೋಪಿ

ದೂರುದಾರನಿಂದ ಹಣ ಪಡೆದುಕೊಂಡು ಜೇಬಿಗೆ ಇಟ್ಟುಕೊಂಡ ಬಗ್ಗೆ ಹೇಳುತ್ತಾನೆ ಆದರೆ ಹಣವನ್ನು ಎಣಿಸಿದ ಬಗ್ಗೆ ಹೇಳಿರುವುದಿಲ್ಲ ಎನ್ನತ್ತಾರೆ.

8. ದೂರುದಾರ ನನ್ನ ಮುಂದೆ ನೀಡಿದ ಹೇಳಿಕೆಯಲ್ಲಿ , "ದೂರು ಕೊಡುವ 4 ದಿನಗಳ ಮೊದಲು ನಾನು Sister Teresa ರವರನ್ನು ಕೊನೆಯದಾಗಿ ಭೇಟಿ ಆಗಿದ್ದು , ಈ 4 ದಿವಸದ ಅವಧಿಯಲ್ಲಿ ಅವರು ಭೇಟಿ ಆಗಿರುವುದಿಲ್ಲ " ಎಂದು ಹೇಳಿರುವುದಿಲ್ಲ.

9. ದೂರುದಾರ ನನ್ನ ಮುಂದೆ ನೀಡಿದ ಹೇಳಿಕೆಯಲ್ಲಿ, "ನಾನು ರೂ.15,000/- ಕೊಡುತ್ತೇನೆ , ತೆಗೆದುಕೊಳ್ಳಿ ಎಂದು ಹೇಳಿದ್ದು, ರೆಕಾರ್ಡ ಆಗಿರುತ್ತದೆ " ಎಂದು ಹೇಳಿರುತ್ತಾನೆ. ನಿಪಿ 13 ಪ್ರಾಯೋಗಿಕ ಪಂಚನಾಮೆಯಲ್ಲಿ ಇರುವ ಸಂಭಾಷಣೆಯಲ್ಲಿ, "ನಾನು 15,000/- ರೂ ಕೊಡುತ್ತಿದ್ದೇನೆ, ತೆಗೆದುಕೊಳ್ಳಿ" ಎಂದಿರುವುದಿಲ್ಲ. ದೂರುದಾರ ನನ್ನ ಮುಂದೆ ನೀಡಿದ ಹೇಳಿಕೆಯಲ್ಲಿ "ನಿಪಿ 13 ನ್ನು ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 02.00 ಗಂಟೆಯವರೆಗೆ ಬರೆದಿರುತ್ತಾರೆ ಎಸಿಬಿ ಪೊ.ಠಾಣೆಯನ್ನು ಮಧ್ಯಾಹ್ನ 02.15 ಗಂಟೆಗೆ ಬಿಟ್ಟಿರುತ್ತೇವೆ , ತಾಲ್ಲೂಕು ಕಛೇರಿ ತಲುಪಿದಾಗ ಮಧ್ಯಾಹ್ನ 03.00 ರಿಂದ 03.30 ಗಂಟೆ ಸಮಯವಾಗಿತ್ತು . ನಾನು ಮೋಟಾರು ಸೈಕಲಿನಲ್ಲಿ ಮತ್ತು ಎಸಿಬಿ ಪೋಲೀಸರು ಜೇಪಿನಲ್ಲಿ ಬಂದಿರುತ್ತಾರೆ. ನಾನು ಇಲಾಖಾ ವಾಹನದಲ್ಲಿ ತಾಲ್ಲೂಕು ಕಛೇರಿಗೆ ಹೋಗಿರುವುದಿಲ್ಲ . ನಿಪಿ 15 ನ್ನು ಸಂಜೆ 04.00 ಗಂಟೆಯಿಂದ ಮಧ್ಯರಾತ್ರಿ 12.00 ಗಂಟೆಯವರೆಗೂ ಬರೆದಿರುತ್ತೇವೆ. ನಾನು ಆರೋಪಿಗೆ ಹಣವನ್ನು ಕೊಟ್ಟಾಗ ಮಧ್ಯಾಹ್ನ 03.30 ಗಂಟೆ ಆಗಿರುತ್ತ " ಎಂದು ಹೇಳಿರುವುದಿಲ್ಲ.

10. ದೂರುದಾರ ನನ್ನ ಮುಂದೆ ನೀಡಿದ ಹೇಳಿಕೆಯಲ್ಲಿ, "ಆರೋಪಿಯು ನನ್ನಿಂದ ರೂ.40,000/- ಕೇಳಿದ್ದು , ಟ್ರಾಪ್ ಸಮಯ ಮಾಡಿದ್ದ ವಾಯ್ಸು ರೆಕಾರ್ಡರ್ ನಲ್ಲಿ ದಾಖಲಾಗಿದೆ " ಎಂದು ಹೇಳಿರುವುದಿಲ್ಲ. ಈ ಬಗ್ಗೆ ಟ್ರಾಪ್ ಮಹಜರ್ ನ ಧ್ವನಿ ಮುದ್ರಣದಲ್ಲಿ ಕಂಡು ಬರುವುದಿಲ್ಲ.

11. ದೂರುದಾರ ನನ್ನ ಮುಂದೆ ನೀಡಿದ ಹೇಳಿಕೆಯಲ್ಲಿ ಮತ್ತು ಟ್ರಾಪ್ ಮಹಜರ್ ನಲ್ಲಿ , "ಆರೋಪಿಯ ಎರಡೂ ಕೈಗಳನ್ನು ತೊಳೆಸಿದ ದ್ರಾವಣಕ್ಕೆ ಬಣ್ಣ ಬಂದಿರುತ್ತದೆ " ಎಂದು ಹೇಳಿರುವುದಿಲ್ಲ ಮತ್ತು ನಮೂದಾಗಿರುವುದಿಲ್ಲ. ದೂರುದಾರ ದೂರು ಕೊಟ್ಟ ದಿನವೇ ನಾನು ಆತ ಹೇಳಿಕೆಯನ್ನು ದಾಖಲಿಸಿರುವುದಿಲ್ಲ. ಆತನ ಹೇಳಿಕೆಯಲ್ಲಿ ಇರುವ ಸಂಭಾಷಣೆಯನ್ನು, ಧ್ವನಿ ಮುದ್ರಣದಲ್ಲಿ ಇದ್ದ ಸಂಭಾಷಣೆಯನ್ನೇ ಯಥಾವತ್ತಾಗಿ ಅಲ್ಲಿ ದಾಖಲಿಸಿಕೊಳ್ಳಲಾಗಿದೆ ಎನ್ನುವುದು ಸರಿಯಲ್ಲ. ದಿಃ 15.07.2017 ರಂದು ನಾನು ದೂರುದಾರನ ಹೇಳಿಕೆಯನ್ನು ದಾಖಲಿಸಿಕೊಂಡಿರುವುದಿಲ್ಲ ಎನ್ನುವುದು ಸರಿಯಲ್ಲ.

12. ಪ್ರ.ವ.ವ.ವನ್ನು ಮೊದಲು ನ್ಯಾಯಾಲಯಕ್ಕೆ ಕಳುಹಿಸಿ ನಂತರ ಪಂಚರನ್ನು ಕಛೇರಿಗೆ ಕರೆಸಲಾಗಿತ್ತು ಎನ್ನುವುದು ಸರಿ. ಪಂಚರಿಗೆ ಮೂಲ ದೂರನ್ನು ಓದಿಕೊಳ್ಳಲು ಕೊಟ್ಟಿದ್ದೆ. ನನ್ನ ತನಿಖಾ ಕಾಲದಲ್ಲಿ ನೆರಳು ಸಾಕ್ಷಿಯಾದ ಚಾ,ಸಾ. 3 ರವರು ಆರೋಪಿ ಮತ್ತು ದೂರುದಾರರ ನಡುವೆ ನಡೆದ ಮಾತುಕತೆಯ ಸಂಧರ್ಬದಲ್ಲಿ ಇರಲಿಲ್ಲ ಎನ್ನುವುದು ಸರಿಯಲ್ಲ.

13. "ಆರೋಪಿಯು ತನಗೆ ಸ್ವಲ್ಪ ಹಣ ಕೊಟ್ಟಿದ್ದಾರೆ, ಇದು ಸಾಕಾಗಲ್ಲ "ಎನ್ನುವ ಸಂಭಾಷಣೆ ಮೆಮೋರಿ ಚಿಪ್ಪಿನಲ್ಲಿ ದಾಖಲಾಗಿರಲಿಲ್ಲ.

14. ಚಾ,ಸಾ. 1 ರವರು ನಿಡಿ 2 ರಂತೆ ನನ್ನ ಮುಂದೆ ಹೇಳಿಕೆಯನ್ನು ನೀಡಿರುತ್ತಾರೆ.

15. ಕರ್ನಾಟಕ ಸರ್ಕಾರ 'Truth lab' ನಿಂದ ವರದಿಯನ್ನು ಪಡೆಯಬಹುದು ಎಂದು ನಿರ್ದೇಶಿಸಿರುತ್ತದೆ ಎಂದು ಮಾಡಿದ ಸಲಹೆಗೆ ಸಾಕ್ಷಿ , ಈ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ.

16. ನಿಪಿ 1 ರಲ್ಲಿ ಇರುವಂತಹ Sister Superior Teresa ಎನ್ನುವ ಸಹಿ , ಪುಟ ಸಂಖ್ಯೆ 167 ರ ಮೇಲಿರುವ ತೆರೆಸಾ ರವರ ಸಹಿ ಮತ್ತು ಪುಟ ಸಂಖ್ಯೆ 242 ರ ದಾಖಲಾತಿಯ ಮೇಲಿರುವ ತೆರೆಸಾ ರವರ ಸಹಿಯೊಂದಿಗೆ ಹೊಲಿಕೆಯಾಗುತ್ತಿಲ್ಲ ಎಂದು Truth lab ಅಭಿಪ್ರಾಯಪಟ್ಟಿರುತ್ತದೆ ಎಂದು ಮಾಡಿದ ಸಲಹೆಗೆ ಸಾಕ್ಷಿ, ಈ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎನ್ನುತ್ತಾರೆ.

17. ದೂರುದಾರ ಸುಳ್ಳು ದೂರುಗಳನ್ನು ನೀಡುವ ಹವ್ಯಾಸವನ್ನು ಹೊಂದಿದ ವ್ಯಕ್ತಿ ಆಗಿರುತ್ತಾನೆ ಎನ್ನುವುದು ಸರಿಯಲ್ಲ. ಆತ ನಮಗೆ ಸುಳ್ಳು ಮಾಹಿತಿಗಳನ್ನು ನೀಡಿರುತ್ತಾನೆ ಎನ್ನುವುದು ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿಗೂ ಯಾವುದೇ ರೀತಿಯ ಸಂಬಂಧ ಇರದಿದ್ದರೂ ಸಹ, ದೂರುದಾರ ನೀಡಿದ ಸುಳ್ಳು ಮಾಹಿತಿಗಳ ಆಧಾರದ ಮೇಲೆ ಆರೋಪಿಯ ವಿರುದ್ಧ ಸುಳ್ಳು ದೋಷಾರೋಪಣೆ ಪಟ್ಟ ಸಲ್ಲಿಸಲಾಗಿದೆ ಎನ್ನುವುದು ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.